ಹೋಗಲು ಅವಕಾಶ ದೊರೆಯಿತು. ಹೀಗೆ ಆ ಕುಟುಂಬದಲ್ಲಿ ವಾತಾವರಣವೇ ಸಂಪೂರ್ಣ ಬದಲಾಯಿತು. 'ಜೀವನವನ್ನು ಕೇವಲ (ಟಿ.ವಿ.ಯಲ್ಲಿ) ನೋಡುವುದನ್ನು ಬಿಟ್ಟು ನಿಜವಾಗಿ ಜೀವಿಸ ತೊಡಗಿದೆವು' ಎನ್ನುತ್ತಾರೆ ಕ್ಯಾಥರಿನ್. (ರೀಡರ್ಸ್ ಡೈಜೆಸ್ಟ್, ಸೆಪ್ಟೆಂಬರ್, ೨೦೦೦)

ಮನೆಯಲ್ಲಿ ಅತಿಯಾಗಿ ಟಿ.ವಿ. ಬಳಕೆಯಿಂದ ಮಕ್ಕಳಿಗೆ ಓದುವುದಕ್ಕೆ ತೊಂದರೆಯಾಗುತ್ತಿದೆ. ಶಾಂತ ಜೀವನ ನಡೆಸಬೇಕೆನ್ನುವವರಿಗೆ ಅಸಾಧ್ಯ ಕಷ್ಟವಾಗುತ್ತಿದೆ. ಅನೇಕ ಯುವಕರು, ವಿದ್ಯಾರ್ಥಿಗಳು, ಆಧ್ಯಾತ್ಮಿಕ ಒಲವುಳ್ಳವರು ಮನೆಯಲ್ಲಿ ಆಗುತ್ತಿರುವ ಟಿ.ವಿ. ಹಾವಳಿಯ ಬಗ್ಗೆ ದೂರುತ್ತಿರುವರು. ಮನೆಯಲ್ಲಿ ಹಿರಿಯರು ಈ ವಿಷಯದಲ್ಲಿ ಹೆಚ್ಚು ಜಾಗೃತರಾಗುವುದು ಒಳ್ಳೆಯದು. ಮಕ್ಕಳ ಅಧ್ಯಯನಕ್ಕೆ ಮನೆಯಲ್ಲಿ ಯೋಗ್ಯ ವಾತಾವರಣವನ್ನು ಕಲ್ಪಿಸಬೇಕು, ಅವರು ರಚನಾತ್ಮಕ ಕೆಲಸದಲ್ಲಿ ತೊಡಗುವಂತೆ ಉತ್ತೇಜನ ನೀಡಬೇಕು. ಇವಕ್ಕಾಗಿ ಟಿ.ವಿ.ಯನ್ನು ಹಿತಮಿತವಾಗಿ ಬಳಸುವುದನ್ನು ಕಲಿಯಬೇಕು.

ಟಿ.ವಿ. ಪರದೆಯ ಹಿಂದೆ ಇರುವ ಜನರೊಡನೆ ವಾಸಿಸುವುದಕ್ಕಿಂತ ನಮ್ಮ ಕಣ್ಮುಂದೆ ಇರುವ ಜನರೊಡನೆ ವಾಸಿಸುವುದನ್ನು ಕಲಿಯೋಣ. ❒

## ಮಂದ ಭಾರತ

ಭಾರತೀಯರು ಪರಲೋಕ ಪ್ರಿಯರು. ಇಹಲೋಕ ಮಾಯೆಯಾದುದರಿಂದ ಇಲ್ಲಿ ಯಶಸ್ಸನ್ನು ಗಳಿಸುವುದೆಂದರೆ ಆಕಾಶದಲ್ಲಿ ಅರಮನೆಯನ್ನು ಕಟ್ಟಿದಂತೆ. ಈ ನಶ್ವರ ಜಗತ್ತಿನಲ್ಲಿ, ಇಂದಿದ್ದು ನಾಳೆ ಹೊರಟುಹೋಗುವ ನಾವು, ಇಲ್ಲಿಯೇ ಶಾಶ್ವತವಾಗಿ ನೆಲೆಯೂರುವೆವೊ ಎಂಬಂತೆ ಏನೇನೋ ಸಾಧಿಸಲು ಹೋರಾಡುವುದು ಹುಚ್ಚುತನ. ಇರುವಷ್ಟು ದಿನ ಹೇಗೊ ಜೀವಿಸಿದರಾಯಿತು — ಅನೈತಿಕವಾಗಿಯೊ ನೈತಿಕವಾಗಿಯೊ, ಸಭ್ಯರಾಗಿಯೊ ಅಸಭ್ಯರಾಗಿಯೊ, ಪರಾಜಿತರಾಗಿಯೊ ಜಯಶಾಲಿಗಳಾಗಿಯೊ, ಅವಮಾನಿತರಾಗಿಯೊ ಗೌರವಾನ್ವಿತರಾಗಿಯೊ—ಹೇಗೊ ಬಾಳಿ ಕಣ್ಮರೆಯಾಗುವುದು. ಇದು ಸಾಮಾನ್ಯ ಭಾರತೀಯರ ಮನೋಭಾವವಿರುವಂತೆ ಕಂಡುಬರುತ್ತದೆ. ಈ ಮನೋಭಾವದಿಂದ ಇಹಪರಗಳೆರಡನ್ನೂ ಕಳೆದುಕೊಳ್ಳುತ್ತೇವೆ ಎಂಬುದನ್ನು ಅವರು ಮರೆತಂತಿದೆ. ಪರಕ್ಕೆ ಹೆಚ್ಚು ಒತ್ತನ್ನು ನೀಡಿ, ಇಹವನ್ನು ಕಡೆಗಣಿಸಿ, ಪರವನ್ನು ಪಡೆಯಲು ಅಸಮರ್ಥರಾಗಿ, ಇಹವನ್ನೂ ಕಳೆದುಕೊಂಡು ಪರದಾಡುತ್ತಿದ್ದೇವೆ. 'ಇಲ್ಲಿ ಸಲ್ಲದವನು ಅಲ್ಲಿಯೂ ಸಲ್ಲ' ಎಂಬ ಬಸವಣ್ಣನವರ ವಚನ ಎಷ್ಟು ಔಚಿತ್ಯಪೂರ್ಣವಾಗಿದೆ!

'ಸರ್ವಾರಂಭ ಪರಿತ್ಯಾಗಿ' ಎಂಬ ಜೀವನ್ಮುಕ್ತನಿಗೆ ಅನ್ವಯಿಸುವ ಹೇಳಿಕೆ ಇಡೀ ಭಾರತದೇಶಕ್ಕೆ ಅನ್ವಯಿಸುವಂತಾಗಿದೆ. ಇಡೀ ದೇಶ ಜೀವನ್ಮುಕ್ತವಾಗಲು ಸಾಧ್ಯವೇ? ಅಂತರಾಷ್ಟ್ರೀಯ ಅಭಿವೃದ್ಧಿ ಕೇಂದ್ರದ ನಿರ್ದೇಶಕರಾದ ಜೆಫ್ರೇ ಸ್ಯಾಚ್ಸ್ ಅವರ ಪ್ರಕಾರ ಭೂಮಿಯ ಜನಸಂದಣಿಯ ಕೇವಲ ಶೇಕಡ ೧೫ ಭಾಗವಿರುವ ಸಣ್ಣ ಭೂಭಾಗವು ಜಗತ್ತಿಗೆ ಬೇಕಾದ ಹೆಚ್ಚು ಕಡಿಮೆ ಎಲ್ಲ ತಾಂತ್ರಿಕ ನವಾನ್ವೇಷಣೆಯನ್ನು ಒದಗಿಸುತ್ತಿದೆ. ಇದರಲ್ಲಿ ಅಮೆರಿಕದ ಸಂಯುಕ್ತ ಸಂಸ್ಥಾನಗಳು, ಕೆನಡ, ಹೆಚ್ಚಿನ ಯೂರೋಪ್ ದೇಶಗಳು, ಆಸ್ಟ್ರೇಲಿಯ, ನ್ಯೂಜಿಲ್ಯಾಂಡ್, ಜಪಾನ್ ಮುಂತಾದ ದೇಶಗಳು ಸೇರುತ್ತವೆ. ಇದರಲ್ಲಿ ಭಾರತಕ್ಕೆ ಸ್ಥಾನವೇ ಇಲ್ಲ. ಭೂಮಿಯ ಜನಸಂಖ್ಯೆಯ ಅರ್ಧದಷ್ಟಿರುವ ಭೂಭಾಗದಲ್ಲಿ ಈ ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗುತ್ತಿದೆ. ಇದರಲ್ಲಿ ಭಾರತದ ತೀರ ಉತ್ತರ ಭಾಗವನ್ನು ಬಿಟ್ಟರೆ ಉಳಿದ ಭಾಗಗಳು ಸೇರುತ್ತವೆ. ಮೂರನೇ ಒಂದರಷ್ಟು ಜನಸಂಖ್ಯೆಯ ಭೂಮಿಯ ಭಾಗದಲ್ಲಿ ಈ ತಂತ್ರಜ್ಞಾನದ ಬಳಕೆಯೂ ಆಗುತ್ತಿಲ್ಲ. ಇದರಲ್ಲಿ ಏಷ್ಯ, ಆಫ್ರಿಕ, ದಕ್ಷಿಣ ಅಮೆರಿಕದ ಹೆಚ್ಚಿನ ದೇಶಗಳು ಸೇರುತ್ತವೆ.

ಭಾರತೀಯರು ಹೆಚ್ಚು ಬುದ್ಧಿವಂತರೆಂದು ಪರಿಗಣಿಸಲ್ಪಟ್ಟಿದ್ದರೂ, ಸಾಫ್ಟ್‌ವೇರ್ ತಂತ್ರಜ್ಞಾನದಲ್ಲಿ ಅವರು ಅಷ್ಟೊಂದು ಮುಂದಿದ್ದರೂ ತಾಂತ್ರಿಕ ನವಾನ್ವೇಷಣೆಯಲ್ಲಿ ಅವರು ತುಂಬ ಹಿಂದಿದ್ದಾರೆ. ಹೊಸತನ್ನು ಬಯಸುವ, ಹೊಸತನ್ನು ಕಂಡು ಹಿಡಿಯುವ, ಹೊಸ ಸಾಹಸವನ್ನು ಮಾಡುವ ಪ್ರವೃತ್ತಿ ಯೌವ್ವನದ ಲಕ್ಷಣ. ಭಾರತ ಎಷ್ಟಾದರೂ ಪುರಾತನ ದೇಶ ತಾನೆ. ಅತ್ಯಧಿಕ ಯುವಕ ಸಂಖ್ಯೆ ಇರುವ ಮುದಿ ರಾಷ್ಟ್ರವೆ ಭಾರತ? ಅಥವಾ ಇನ್ನೂ ಶೈಶವಾವಸ್ಥೆಯನ್ನು ದಾಟಿಲ್ಲವೆ? ೧೯೪೭ರಲ್ಲಿ ಪಡೆದ ಸ್ವಾತಂತ್ರ್ಯವು ಭಾರತಕ್ಕೆ ಪುನರ್ಜನ್ಮದಂತಿರಬೇಕು. ಬಹುಕಾಲದ ಗುಲಾಮಗಿರಿಯಿಂದಾಗಿ ಶಿಶುಸಹಜ ಪರಾವಲಂಬಿತ್ವದಿಂದ ಭಾರತ ಇನ್ನೂ ಮುಕ್ತವಾಗಿಲ್ಲ ಎಂದು ತೋರುತ್ತದೆ. ❒

### ಆಶ್ರಮದ ವಿಶೇಷ ಕಾರ್ಯಕ್ರಮಗಳು

### ಜನವರಿ 2001

| | | |
|---|---|---|
| 01 | ಸೋಮವಾರ | ಕಲ್ಪತರು ದಿನ |
| 01 | ಸೋಮವಾರ | ಸ್ವಾಮಿ ಶಾರದಾನಂದ ಜಯಂತಿ |
| 08 | ಸೋಮವಾರ | ಸ್ವಾಮಿ ತುರೀಯಾನಂದ ಜಯಂತಿ |
| 15 | ಸೋಮವಾರ | ಸ್ವಾಮಿ ವಿವೇಕಾನಂದ ಜಯಂತಿ |
| 26 | ಶುಕ್ರವಾರ | ಸ್ವಾಮಿ ಬ್ರಹ್ಮಾನಂದ ಜಯಂತಿ |
| 28 | ಭಾನುವಾರ | ಸ್ವಾಮಿ ತ್ರಿಗುಣಾತೀತಾನಂದ ಜಯಂತಿ |

ಪ್ರತಿ ಶನಿವಾರ ಇಂಗ್ಲೀಷಿನಲ್ಲಿ ಮತ್ತು ಭಾನುವಾರ ಕನ್ನಡದಲ್ಲಿ ಸಂಜೆ 6.00 ರಿಂದ 7.00 ರವರೆಗೆ ಆಧ್ಯಾತ್ಮಿಕ ಪ್ರವಚನಗಳು ನಡೆಯುತ್ತವೆ.

ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ